# ನವಿಲುಗನ್ನಡಿ

- ಆಗಸ್ಟ್ ಮಯೂರ ಸಂಚಿಕೆಯಲ್ಲಿನ ಜೀಬನ್ ನಾರಾ ಅವರ ಮಾತುಕತೆ 'ಸಾವಿನ ಭಯ ಮತ್ತು ಕೊನೆಯಿರದ ದುಃಖ' (ಸಂದರ್ಶನ: ಜ.ನಾ. ತೇಜಶ್ರೀ) ಒಬ್ಬ ಅಕ್ಕ–ತಮ್ಮನ ಬಾಂಧವ್ಯದ ಮಜಲು ಮನೋಜ್ಞವಾಗಿ ಮೂಡಿಬಂದಿದೆ. ಕಲೀಮ್ ಉಲ್ಲಾ ಅವರ 'ಕಾಡಿಗೆ ಕಣ್ಣು' ಅಂಕಣ ಸೊಗಸಾಗಿತ್ತು.ರಹಮತ್ ತರೀಕೆರೆ ನಡೆಸಿಕೊಟ್ಟ ಅನಿಲ್ ವಿದ್ಯಾರ್ಥಿಯವರ ಸಂದರ್ಶನ ಬಹಳ ಚೆನ್ನಾಗಿ ಮೂಡಿಬಂದಿದೆ.

**ಹೊಸೂರು ರತ್ನಾಕರ ಶೆಟ್ಟಿ, ಹಿರಿಯಡ್ಕ, ಉಡುಪಿ**

- 'ನಾಮ ಕೋಟೆಗಳನು ಮೀಟಿ' ಪ್ರಬಂಧದಲ್ಲಿ ದಾದಾಪೀರ್ ಜೈಮನ್ ಅವರು, ಬಡತನ ಹಾಗೂ ಧಾರ್ಮಿಕ ಅಸಹಿಷ್ಣುತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ, ಅಷ್ಟೇ ಸೂಕ್ಷ್ಮತೆಯಿಂದ ನಿರೂಪಿಸಿದ್ದಾರೆ. ಕೆಲ ಹಕ್ಕಿಗಳನ್ನು ತಿಂದರೆ ಕಾಯಿಲೆ ವಾಸಿಯಾಗುತ್ತದೆ ಹಾಗೂ ಶಕ್ತಿಶಾಲಿಯಾಗುತ್ತೇವೆ ಎಂಬ ಮೂಢನಂಬಿಕೆ, ಹಾಗೂ ಶಿಕಾರಿ ಚಪಲ ಮೊದಲಾದ ಕಾರಣಗಳಿಂದ ಕಾಡಿನ ಪಕ್ಷಿಗಳು, ಹುಲಿಯಂಥ ವನ್ಯಜೀವಿಗಳು ಹೇಗೆ ಅಳಿವಿನಂಚಿಗೆ ತಲುಪಿವೆ ಎಂಬ ವಾಸ್ತವ ಸಂಗತಿಯನ್ನು 'ಕಾಡಿಗೆ ಕಣ್ಣು' ಅಂಕಣದಲ್ಲಿ ಕಲೀಮ್ ಉಲ್ಲಾ ಅವರು ಕಕ್ಕುಲತೆಯಿಂದ ಚಿತ್ರಿಸಿದ್ದಾರೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- 'ಕುರ್ಚಿ' ಕಥೆಯು ತನ್ನೊಳಗೆ ಹಲವು ಗುಟ್ಟುಗಳನ್ನು ಒಳಗೊಂಡಿದೆ. ಭಗವಂತ ರಾಯನ ಪಾಪಪ್ರಜ್ಞೆಯನ್ನು ಒಂದು ಹೊಸ ರೂಪಕವಾಗಿ ಕಥೆಗಾರರು ಈ ಕಥೆಯಲ್ಲಿ ಅನಾವರಣ ಮಾಡಿದ್ದಾರೆ. ನಿವೇದನೆ ಪ್ರಕ್ರಿಯೆ ವಿಚಾರ ಚರ್ಚೆಗೆ ಗ್ರಾಸವಾಗಿದೆ. ಭಾಷೆ ಚೆನ್ನಾಗಿ ಮುಪ್ಪುರಿಗೊಂಡು ಮೂಡಿಬಂದಿದೆ.

**ಸು.ರಾ. ನರಸಿಂಹ ಪ್ರಸಾದ್, ಕುಣಿಗಲ್**

- ಆಗಸ್ಟ್ ತಿಂಗಳ ಮಯೂರದಲ್ಲಿ ಪ್ರಕಟವಾಗಿರುವ ಎಚ್. ಡುಂಡಿರಾಜ್ ಅವರ ಪ್ರಬಂಧ 'ಅಡ್ಡ ಯೋಚನೆ' ಮನಸ್ಸಿಗೆ ಆಹ್ಲಾದಕರವೆನಿಸಿತು.

**ಕಣಜನಹಳ್ಳಿ ಚಂದ್ರಶೇಖರ್**




- ಕವಿ ಮತ್ತು ಬರಹಗಾರ ಸಾಲಿ ರಾಮಚಂದ್ರ ರಾಯರ ಬಗ್ಗೆ ಸಾಕಷ್ಟು ಓದಿದ್ದೆ. ಅಜ್ಜನ ಡೈರಿಯಲ್ಲಿನ ಸಂಗತಿಗಳು ಅಪರೂಪದ ವಿಚಾರ. ಧಾರವಾಡದಲ್ಲಿ ಸಪ್ತಾಪುರದಲ್ಲಿದ್ದ ಅವರ ಸ್ವನಿವೇಶನವನ್ನು ಮಾರಾಟ ಮಾಡಲಾಗಿದೆ ಎಂಬ ಸುದ್ದಿ ಸ್ವಲ್ಪ ಬೇಸರವನ್ನುಂಟು ಮಾಡಿತು. ಆದರೆ ಆ ವಿಚಾರ ಅವರ ಕುಟುಂಬಕ್ಕೆ ಬಿಟ್ಟದ್ದು. ಈ ಉತ್ತಮ ಬರವಣಿಗೆಯನ್ನು ನೀಡಿದ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರಿಗೆ ಮತ್ತು 'ಮಯೂರ' ಸಂಪಾದಕ ಮಂಡಳಿಗೆ ಅಭಿನಂದನೆಗಳು.

**ಸುಶೀಲಾ ಬಿ.ಆರ್. ರಾಮಣ್ಣ, ಬೆಂಗಳೂರು**

- ಮೀನಾಕ್ಷಿ ಹೆಂಗವಳ್ಳಿಯವರ 'ಕನ್ನಡವೆಂದರೆ...' ಪ್ರಬಂಧದಲ್ಲಿ, ಅತ್ತೆಯ ಶುಶ್ರೂಷೆಗೆ ಒಬ್ಬರ ನಂತರ ಒಬ್ಬರು ನೇಮಕಗೊಳ್ಳುವ ಆಯಾಗಳ ಆಡುಮಾತುಗಳ ವೈವಿಧ್ಯತೆ ಬಿಟ್ಟರೆ ಮತ್ತೆಲ್ಲಿಯೂ ಕನ್ನಡದ ಬಗೆಗೆ ಅಷ್ಟಾಗಿ ಹೇಳಿರುವುದು ಕಂಡು ಬರುವುದಿಲ್ಲ. ಬದಲಿಗೆ ಪ್ರಬಂಧದ ತುಂಬಾ ಅತ್ತೆಯ ಶುಶ್ರೂಷೆಯ ವಿಷಯವೇ ತುಂಬಿರುವುದರಿಂದ ಇದೊಂದು ಬಗೆಯ 'ಅತ್ತೆಯೆಂದರೆ...' ಎನ್ನುವ ಪ್ರಬಂಧದಂತಾಗಿದೆ!

**ಶಂಕರೇಗೌಡ ತುಂಬಕೆರೆ, ಮಂಡ್ಯ**